






ಅಥ್ವಾ, ಬೊಬಲ್‌ಗಮ್ ಊದಿ 'ಢಮಾರ್' ಅನಿಸಿ
ಉಂಡೆ ಮಾಡಿ ಮುಂದೆ ಕುಂತವರ ತಲೆಗೆ ಹಚ್ಚಿ
ಅವ್ರ ಪಾಠಕ್ಕ ಅಡ್ಡಿ ಪಡ್ಸಿದ್ದಿದ್ದರೆ
'ಎಂಥಾ ಅಡ್ನಾಡಿ' ಅಂತ ಕ್ಲಾಸಿನಿಂದ ಹೊರ ಹಾಕ್ಸಿ
ಉರಿ ಬಿಸಿಲಾಗ ಒಂಟಿಗಾಲಲ್ಲಿ ನಿಲ್ಸಿ ಬೆಂಡೆತ್ತಬೋದಿತ್ತು
ಹೆಂಗಿದ್ರು ಛಡಿ ಅವ್ರ ಕೈಯಾಗೇ ಇತ್ತು...

ಆದ್ರ ತಾಯಿ, ಕಾಲ್ಮರಿ ಹೊಸಲಾಚೆ ಬುಟ್ಟು
ನಿಂಗೆರಡು ಕೈ ಜೋಡಿಸಿಟ್ಟು; ಕಣ್ಮುಚ್ಚೊ ಸಾಲಿವಳ್ಗೂ
'ಅವ್ರಗೊಂದು' ಗಡಿಗೆ 'ನಮ್ಗೊಂದು' ಗಡಿಗೆಯಿಟ್ಟು
'ಮುಟ್ಟಿದ್ದೆ' ಅಪರಾಧ ಆಗಿ ಬಡ್ದು ಕೊಂದ್ರಲ್ಲ
ಆ ಕೈಯಿಂದಲೇ ನನ್ ಕೂಸಿನ ಉಸ್ರು ವಾಪಸ್ ಕೊಡ್ಸು
ಇಲ್ಲಾ, ಅವ್ರ ಕೈಯಾಗಿನ ಛಡಿ ನಮ್ ಕೈಯಾಗ ಕೊಡ್ಸು...

***

ಇಗೊ, ಹಿಂಗೆ ಅವಲತ್ತುಕೊಳ್ಳುತಿದ್ದ
ದ್ಯಾಮವ್ವನ ದುಖಃಕ್ಕ ಪಾರಯಿಲ್ಲದೆ
ಸೇರಿದ ಮಂದಿ ಕಣ್ಣಾಗೂ ನೀರಾಡಿ ಬಿಟ್ಟಿತ್ತು...





ಈ ಕಾವ್ಯರೂಪಕದ ಪಯಣ
ಮುಂದಿನ ಸಂಚಿಕೆಯಲ್ಲಿ
ಮತ್ತೊಬ್ಬ ಕವಿಯೊಂದಿಗೆ
ಮುಂದುವರೆಯುವುದು.